# ಯಶಸ್ವಿನಿ ಅವಳ ಯಶೋಗಾಥೆ



ಅಂತರರಾಷ್ಟ್ರೀಯ
ಮಹಿಳಾ ದಿನಾಚರಣೆ
2026
**ಗಿವ್ ಟು ಗೇನ್**

ಅಂತರರಾಷ್ಟ್ರೀಯ ಮಹಿಳಾ ದಿನ ಬಂದಿದೆ. ಸಮಾಜದಲ್ಲಿ ಎಷ್ಟು ಬದಲಾವಣೆಯಾಗಬೇಕಿದೆ? ಏನಾಗಬೇಕಿದೆ? ಮಹಿಳೆಯರಿಗೆ ಅವರ ಕ್ಷಮತೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾದ ಅವಕಾಶ, ಸಂಬಳ ಹಾಗೂ ಅಧಿಕಾರ ದೊರೆಯಬೇಕು ಎಂಬ ವಾದವು ಪ್ರತಿವರ್ಷವೂ ಚರ್ಚೆಗೆ ಬರುತ್ತದೆ. ಇವನ್ನೆಲ್ಲ ಬದಿಗಿರಿಸಿ, ತಮ್ಮ ಸಾಮರ್ಥ್ಯದಿಂದಲೇ ವಿಭಿನ್ನವಾದ ಕ್ಷೇತ್ರಗಳಲ್ಲಿ, ತಮ್ಮ ಛಾಪನ್ನು ಮೂಡಿಸಿರುವ ಯಶಸ್ವಿನಿಯರ ಯಶೋಗಾಥೆ ಈ ವಾರದ 'ಸುಧಾ' ಸಂಚಿಕೆಯಲ್ಲಿದೆ. ಬದಲಾಗಬೇಕಿರುವುದು ಏನು, ಎಷ್ಟು ಎಂಬುದು ಇವರ ಕಥೆಗಳನ್ನು ಓದುವಾಗ ನಮ್ಮ ಅನುಭವಕ್ಕೆ ಮತ್ತು ಅರಿವಿಗೆ ಬರುತ್ತದೆ. ಈ ಸ್ಫೂರ್ತಿದಾಯಕ ಕಥನಗಳು ನಮ್ಮ ಮನೆಯ ಹೆಣ್ಣುಮಕ್ಕಳಿಗೆ ಹೊಸ ಅವಕಾಶಗಳನ್ನೂ, ಹೊಸ ಕ್ಷಿತಿಜವನ್ನೂ ತೆರೆದಿಡಲಿ ಎಂಬುದು ಈ ಸಂಚಿಕೆಯ ಆಶಯ.

■ ನೇಮಿಚಂದ್ರ

## ವಿಮಾನ ಚಾಲಕರಿಗೆ 'ದೃಷ್ಟಿ'ಯ ರೂವಾರಿ ಶುಭಾ

ನಾನು ಶಾಲೆ ಓದಿದ 1970ರ ದಶಕದಲ್ಲಿ, ಪಠ್ಯಪುಸ್ತಕದಲ್ಲೂ ಮಹಿಳಾ ವಿಜ್ಞಾನಿಗಳ ಉಲ್ಲೇಖವಿರಲಿಲ್ಲ. 1976ರಲ್ಲಿ ಎಂಜಿನಿಯರಿಂಗ್ ರಂಗವನ್ನು ಪ್ರವೇಶಿಸುವಾಗ ನನ್ನಲ್ಲಿ ಸಾಕಷ್ಟು ಅಳುಕು, ಆತಂಕವಿತ್ತು. ಕಾರಣ ನನ್ನೆದುರು ಉದಾರಣೆಗಳಿರಲಿಲ್ಲ. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಹೆಣ್ಣುಮಕ್ಕಳ ರಂಗಗಳಲ್ಲ ಎಂಬ ಭಾವವಿತ್ತು. ಆಂಗ್ಲ ಭಾಷೆಯಲ್ಲಿ ಇವು 'ಎಸ್.ಟಿ.ಇ.ಎಮ್' ಕ್ಷೇತ್ರಗಳೆಂದು ಪ್ರಸಿದ್ಧವಾಗಿವೆ. ಈ ರಂಗಗಳಲ್ಲಿ ಹೆಣ್ಣುಮಕ್ಕಳು ಅಲ್ಪಸಂಖ್ಯಾತರಾಗಿದ್ದರು.

ಕಳೆದ ಅರ್ಧ ಶತಮಾನದಲ್ಲಿ ಬಹಳಷ್ಟು ಸಕಾರಾತ್ಮಕ ಬದಲಾವಣೆಯನ್ನು ಕಂಡಿದ್ದೇನೆ. ಇಂದು ನಮ್ಮ ದೇಶದಲ್ಲಿ ಈ ಕ್ಷೇತ್ರಗಳಿಗೆ ಪ್ರವೇಶಿಸುವ ವಿದ್ಯಾರ್ಥಿಗಳಲ್ಲಿ ಶೇ. 43 ಹೆಣ್ಣುಮಕ್ಕಳು ಎಂಬುದು ಸಂತಸದ ವಿಷಯ. ಆದರೆ ಈ ರಂಗಗಳಲ್ಲಿ ಉದ್ಯೋಗದಲ್ಲಿರುವ ಹೆಣ್ಣುಮಕ್ಕಳ ಸಂಖ್ಯೆ ಶೇ. 27 ಮಾತ್ರ.

ಪ್ರತಿವರ್ಷ ಪದ್ಮ ಪುರಸ್ಕಾರಗಳನ್ನಾಗಲಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳ ಪಟ್ಟಿಯನ್ನಾಗಲಿ ನೋಡಿದರೆ, ಅಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಹೆಣ್ಣುಮಕ್ಕಳ ಹೆಸರುಗಳು ಕಾಣುವುದೇ ಅಪರೂಪ. ರಾಜ್ಯೋತ್ಸವ ಪ್ರಶಸ್ತಿ ವಿಜ್ಞಾನ ರಂಗದಲ್ಲಿ

